<u>ದಿನಾಂಕಃ 12-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 3 ನೇ ಪ್ರತಿವಾದಿ ಪರ ವಕೀಲರಿಂದಃ-</u>

3 ನೇ ಪ್ರತಿವಾದಿಯು ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅವರೇ ನಮ್ಮ ಮನೆಯಲ್ಲಿ ನಮ್ಮ ಜಮೀನಿನ ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ನನ್ನ ಜೊತೆಯಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ವಾದಿ ಹಾಗೂ ಇತರ ಪ್ರತಿವಾದಿಯರು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯನ್ನು ಹೊರತುಪಡಿಸಿ ವಾದಿ ಹಾಗೂ ಇತರ ಪ್ರತಿವಾದಿಯರಿಗೆ ವ್ಯವಹಾರ ಜ್ಞಾನ ಇರುತ್ತದೆ ಎಂದರೆ ಸಾಕ್ಷಿದಾರರು ಎಲ್ಲರಿಗೂ ವ್ಯವಹಾರ ಜ್ಞಾನ ಇತ್ತು ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಗೆ ವ್ಯವಹಾರ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಂಖ್ಯೆಃ5 ರ ಪೈಕಿ 2 ಎಕರೆಯಲ್ಲಿ ಅಡಿಕೆ ತೋಟ ಇರುತ್ತದೆ. ಸದರಿ ಸ್ವತ್ತಿನಲ್ಲಿ 23 ಗುಂಟೆಯಲ್ಲಿ 3 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ದಿ 3 ನೇ ಪ್ರತಿವಾದಿಯು ಅಡಿಕೆ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1 ರಿಂದ ನಿಡಿ-6 ರ ಭಾವಚಿತ್ರದಲ್ಲಿ ಕಾಣುತ್ತಿರುವ ಅಡಿಕೆ ಬೆಳೆಯನ್ನು 3 ನೇ ಪ್ರತಿವಾದಿಯೇ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಹಾಕಿದ ನಂತರ ನನ್ನ ಹೆಂಡತಿಯ ಹೆಸರಿನಲ್ಲಿ ಸದರಿ ಜಮೀನು ಇರುತ್ತದೆ ಎಂದು ಹೇಳಿ 3 ನೇ ಪ್ರತಿವಾದಿಯಿಂದ ಸದರಿ ಜಮೀನಿನ ಉಳುಮೆಯನ್ನು ಬಿಡಿಸಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಸದರಿ ಜಮೀನಿನ ಬಾಬ್ತು ಚೇಣಿ(ಲೀಸ್) ನೀಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ 23 ಗುಂಟೆ

ಜಮೀನನ್ನು 3 ನೇ ಪ್ರತಿವಾದಿಗೆ ಬಿಟ್ಟು ಕೊಡಲು ನನ್ನ ತಕರಾರು ಇರುತ್ತದೆ. 3 ನೇ ಪ್ರತಿವಾದಿಯು 10 ಲಕ್ಷ ಹಣವನ್ನು ಖರ್ಚು ಮಾಡಿ ಸದರಿ ಅಡಿಕೆ ತೋಟವನ್ನು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಡಿಕೆ ತೋಟದಿಂದಲೇ 3 ನೇ ಪ್ರತಿವಾದಿಯ ಜೀವನ ನಡೆಯುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಐಟಂ ನಂ.3 ರ ಸರ್ವೆ ನಂ.41 ರಲ್ಲಿ 3 ನೇ ಪ್ರತಿವಾದಿಯು ಅಡಿಕೆ ಬೆಳೆ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ಅಡಿಕೆ ಬೆಳೆ ಬೆಳೆದಿರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(3 ನೇ ಪ್ರತಿವಾದಿ ಪರ ವಕೀಲರು ಉಳಿದಂತೆ ವಾದಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಲು ಕೋರಿದ್ದು ಅಳವಡಿಸಿದೆ).

<u>ಪಾಟೀ ಸವಾಲುಃ- 2 ಮತ್ತು 4 ನೇ ಪ್ರತಿವಾದಿಯರು ಏಕಪಕ್ಷೀಯ</u>

<u>ಮರು ವಿಚಾರಣೆಃ- ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

ಎಸ್ಆರ್ಃ

ಓ.ಎಸ್.ನಂ.60/2022
ಡಿ.ಡಬ್ಲ್ಯೂಃ 1